**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 200/2020**

ಸಿಡಬ್ಲ್ಯೂಃ 4

ಪಿಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ರತ್ನ ಮೂಡಿ |
| ಗಂಡನ ಹೆಸರು | : | ಮಲ್ಲೇಶಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಬಾವಾಪುರ |

ಇಂದು ದಿನಾಂಕಃ 13.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ-1 ನನ್ನ ಮೈದುನನ ಹೆಂಡತಿ. ಚಾಸಾ-2 ಮತ್ತು 3 ರವರ ಪರಿಚಯ ನನಗೆ ಇರುತ್ತದೆ. ಆರೋಪಿತರ ಪರಿಚಯ ನನಗೆ ಇರುತ್ತದೆ. ಈಗ ಸಮಾರು 4-5 ವರ್ಷಗಳ ಹಿಂದೆ ಬೆಳಿಗ್ಗೆ 9 ಗಂಟೆಯ ಸಮಯಕ್ಕೆ ನಾನು ಮತ್ತು ಚಾಸಾ-1 ರವರು ಹೊಲಕ್ಕೆ ಹೋಗಿರುವಾಗ ಆರೋಪಿತರ ಬಂದು ನಮ್ಮನ್ನು ಕೈಯಿಂದ ಹೊಡೆದು ಕಾಲಿನಿಂದ ಒದ್ದಿರುತ್ತಾರೆ. 1 ಮತ್ತು 2 ನೇ ಆರೋಪಿತರು ನನ್ನ ಮತ್ತು ಚಾಸಾ-1 ರವರ ಸೀರೆಯನ್ನು ಎಳೆದಾಡಿ ನಮಗೆ ಅವಮಾನ ಮಾಡಿರುತ್ತಾರೆ. ಆಗ ಜಗಳವನ್ನು ಚಾಸಾ-5 ಮತ್ತು 6 ರವರು ಬಿಡಿಸಿರುತ್ತಾರೆ. ಆರೋಪಿತರು ಆ ಸಮಯದಲ್ಲಿ ನಿಮ್ಮನ್ನು ಬಿಡುವುದಿಲ್ಲ ಸಾಯಿಸಿಬಿಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ಚಾಸಾ-1 ರವರು ದೂರನ್ನು ನೀಡಿದ್ದು, ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರು ಇದಿದ್ದು ಆರೋಪಿತರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ಆರೋಪಿತರ ಗುರುತಿಸುವಿಕೆಯನ್ನು ಕೈಬಿಡಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ಚಾಸಾ-5 ಮತ್ತು 6 ರವರು ನಮ್ಮ ಸಂಬಂದಿಕರು ಎಂದರೆ ಸರಿ. ಯಾವ ಸರ್ವೆನಂಬರು ಜಮೀನಿನಲ್ಲಿ ನಾವು ಕೆಲಸ ಮಾಡುತ್ತಿದ್ದೆವು ಎಂದು ಹಾಗೂ ಆರೋಪಿತರು ಬಂದು ಗಲಾಟೆ ಮಾಡಿದರು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನನ್ನ ಮತ್ತು ಆರೋಪಿತರ ನಡುವೆ

ಜಮೀನಿಗೆ ಸಂಬಂದಿಸಿದಂತೆ ವಿವಾದ ಇದಿದ್ದು, ಆರೋಪಿತರು ಅಸಲು ದಾವಾ ಸಂಖ್ಯೆ 254/2013 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಆರೋಪಿತರೇ ವಿವಾದಿತ ಜಮೀನಿನ ಮಾಲೀಕರು ಹಾಗೂ ಕಬ್ಜಾದಾರರು ಎಂದು ನಿರ್ಧರಿಸಲ್ಪಟ್ಟಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಬಗ್ಗೆ ನಮಗೆ ವೈಮನಸ್ಸು ಇರುವ ಕಾರಣದಿಂದ ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲದಿದ್ದರೂ ನಾವು ಅವರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಾನು ಹೇಳುವಂತೆ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಹಾಗೂ ಅವಮಾನ ಮಾಡುವ ಉದ್ದೇಶದಿಂದ ಸೀರೆಯನ್ನು ಎಳೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸ್ ಠಾಣೆಗೆ ಯಾವತ್ತೂ ಹೋಗಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.